## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 251 |
| ಸದಸ್ಯರ ಹೆಸರು | ಮಾನ್ಯ ಶ್ರೀ ಪಿ.ಆರ್. ರಮೇಶ್ |
| ಉತ್ತರಿಸುವ ದಿನಾಂಕ: | 11.07.2018 |
| ಉತ್ತರಿಸುವ ಸಚಿವರು: | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ಆಂಧ್ರ ರಾಜ್ಯದಲ್ಲಿರುವ ತಿರುಮಲ ತಿರುಪತಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಮಾಲೀಕತ್ವ/ ಗುತ್ತಿಗೆ/ ಬಾಡಿಗೆಯ ಆಧಾರದಲ್ಲಿ ನಿವೇಶನ ಅಥವಾ ಜಮೀನುಗಳನ್ನು ಹೊಂದಿದೆಯೇ; ಹೊಂದಿದ್ದಲ್ಲಿ ಈ ನಿವೇಶನಗಳ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡುವುದು; | ತಿರುಪತಿ, ತಿರುಮಲದಲ್ಲಿ ಕರ್ನಾಟಕದ ಯಾತ್ರಾರ್ಥಿಗಳಿಗಾಗಿ ಭವನ ನಿರ್ಮಾಣ ಮಾಡುವ ಸಂಬಂಧ ಸರ್ಕಾರದ ಅಧೀನದಲ್ಲಿ ಈ ಹಿಂದೆ ಒಟ್ಟು 7ಎಕರೆ 60ಸೆಂಟ್ಸ್ ವಿಸ್ತೀರ್ಣದ ಜಮೀನಿದ್ದು, ಇದರಲ್ಲಿ ರಸ್ತೆ ವಿಸ್ತರಣೆ ಹಾಗೂ ವೀಕ್ಷಣಾ ಗ್ಯಾಲರಿ ನಿರ್ಮಾಣಕ್ಕಾಗಿ 55ಸೆಂಟ್ಸ್ ಸ್ಥಳವನ್ನು ಟಿಟಿಡಿ ಪ್ರಾಧಿಕಾರದವರು ವಶಪಡಿಸಿಕೊಂಡಿರುತ್ತಾರೆ. ಉಳಿದಂತೆ 7-05ಎಕರೆ ಜಮೀನು ಕರ್ನಾಟಕ ಸರ್ಕಾರದ ವಶದಲ್ಲಿರುತ್ತದೆ.<br><br>ತಿರುಮಲದಲ್ಲಿನ 7-05ಎಕರೆ ಜಮೀನಿನಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಹೆಚ್ಚುವರಿ ವಸತಿ ಸಂಕೀರ್ಣ ನಿರ್ಮಿಸಲು ಉದ್ದೇಶಿಸಿ, ನೂತನ ವಸತಿ ಸಂಕೀರ್ಣ ಕಾಮಗಾರಿ ಪ್ರಕ್ರಿಯೆ ಆರಂಭಿಸಿದ ಸಂದರ್ಭದಲ್ಲಿ ತಿರುಮಲದಲ್ಲಿನ ಖಾಸಗಿ ವ್ಯಕ್ತಿಯು ಮಾನ್ಯ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: Wp:23801/2010ಅನ್ನು ದಾಖಲಿಸಿರುತ್ತಾರೆ, ಸದರಿ ಪ್ರಕರಣದಲ್ಲಿ ದಿನಾಂಕ:16.11.2010ರಂದು ಯಥಾಸ್ಥಿತಿ ಕಾಪಾಡಿಕೊಂಡು ಹೋಗಲು ತಡೆಯಾಜ್ಞೆ ನೀಡಿರುತ್ತದೆ. ಆಂಧ್ರ ಸರ್ಕಾರ ಮತ್ತು ಟಿಟಿಡಿ ಪ್ರಾಧಿಕಾರದವರು ಕೌಂಟರ್ ಅಫಿಡವಿಟ್ ನ್ಯಾಯಾಲಯಕ್ಕೆ ದಾಖಲಿಸುವವರೆಗೂ ಪ್ರಕರಣ ಇತ್ಯರ್ಥವಾಗುವುದಿಲ್ಲ ಎಂಬ ಮಾಹಿತಿ ಗಮನಕ್ಕೆ ಬಂದಿದ್ದರಿಂದ ಸದರಿ ಪ್ರಕರಣದಲ್ಲಿ ತಡೆಯಾಜ್ಞೆ ತೆರವುಗೊಳಿಸಲು ಪ್ರಕರಣ ಸಂಖ್ಯೆ:WVMP 538/2011ಅನ್ನು ದಾಖಲಿಸಿದ್ದು, ದಿನಾಂಕ:28.12.2011ರಂದು ಸದರಿ ಪ್ರಕರಣವನ್ನು ಮಾನ್ಯ ನ್ಯಾಯಾಲಯವು ವಜಾ ಗೊಳಿಸಲಾಗಿರುತ್ತದೆ. ಸದರಿ ಪ್ರಕರಣವನ್ನು ಪುನರ್ ಸ್ಥಾಪಿಸಲು ಛತ್ರದ ಪರವಾಗಿ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:WPMP SR No.213799/2016ಅನ್ನು ದಾಖಲಿಸಿದ್ದು, ದಿನಾಂಕ:04.06.2018ರಂದು ಮಾನ್ಯ ನ್ಯಾಯಾಲಯದ ಮುಂದೆ ಪ್ರಕರಣ ಬಂದಿದ್ದು ದಿನಾಂಕ:11.07.2018ಕ್ಕೆ ಮುಂದೂಡಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನನ್ವಯ ನಿಯಮಾನುಸಾರ ಮುಂದಿನ ಕ್ರಮ ವಹಿಸಬೇಕಾಗಿರುತ್ತದೆ. |

..2

**ಆ** ತಿರುಪತಿ ತಿರುಮಲದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯ ಅಡಿಯಲ್ಲಿ ಅತಿಥಿ ಗೃಹ, ಛತ್ರ, ಸಮುದಾಯ ಭವನ ಇವೆಯೇ; ಹೊಂದಿದ್ದಲ್ಲಿ ಈ ನಿವೇಶನಗಳ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡುವುದು;

ತಿರುಪತಿಯ ಗಾಂಧಿ ರಸ್ತೆಯಲ್ಲಿರುವ 45.05 ಸೆಂಟ್ಸ್ ಜಮೀನಿನಲ್ಲಿರುವ ಕಲ್ಯಾಣ ಮಂಟಪ-ಕೊಠಡಿಗಳ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಸದರಿ ಕಟ್ಟಡವನ್ನು ನೆಲ ಸಮಗೊಳಿಸಿ ಸದರಿ ಸ್ಥಳದಲ್ಲಿ ಹೊಸದಾಗಿ ವಾಣಿಜ್ಯ ಸಂಕೀರ್ಣ ಹಾಗೂ ವಸತಿ ಗೃಹ ಕಟ್ಟಡ ನಿರ್ಮಾಣ ಅಥವಾ ಕಲ್ಯಾಣ ಮಂಟಪ ನಿರ್ಮಾಣ ಈ ಎರಡು ಕಾಮಗಾರಿಗಳಲ್ಲಿ ಯಾವ ಸ್ವರೂಪದ ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ.

ತಿರುಮಲದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ಛತ್ರವಿರುತ್ತದೆ. ಸದರಿ ಕರ್ನಾಟಕ ರಾಜ್ಯಛತ್ರದ ಕಟ್ಟಡದಲ್ಲಿ ಕೆಳಕಂಡಂತೆ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ..

| ಕ್ರ. ಸಂ. | ವಿವರ | |
|---|---|---|
| 1 | ಕರ್ನಾಟಕ ಪ್ರವಾಸಿ ಸೌಧ | 86 ಕೊಠಡಿಗಳು, 1 ಕಲ್ಯಾಣ ಮಂಟಪ |
| 2 | ಕರ್ನಾಟಕಕಲ್ಯಾಣ ಮಂಟಪ | 8 ಕೊಠಡಿಗಳು, 1 ಕಲ್ಯಾಣ ಮಂಟಪ |
| 3 | ಕುಟೀರಗಳು | ಸಂ.7/ಎ ಮತ್ತು ಬಿ: ಸಂ.14/ಎ ಮತ್ತು ಬಿ ಕೆ-1, ಕೆ-2 ಮತ್ತು ಕೆ-3 ವಸತಿ ಗೃಹಗಳದ್ದು 7 ಕೊಠಡಿಗಳಿರುತ್ತದೆ |

ತಿರುಚಾನೂರಿನಲ್ಲಿರುವ ಪದ್ಮಾವತಿ ಅಮ್ಮನವರ ದೇವಸ್ಥಾನದ ಪಕ್ಕದಲ್ಲಿರುವ ಸುಮಾರು 14 ಸೆಂಟ್ಸ್ ಜಮೀನಿನಲ್ಲಿ 02 ಮಿನಿ ಕಲ್ಯಾಣ ಮಂಟಪ ,ವಾಹನ ನಿಲುಗಡೆ,ಅಡುಗೆ ಮನೆ,19 ಕೊಠಡಿಗಳನ್ನು ಒಳಗೊಂಡ ರಾಜ್ಯ ಛತ್ರ ಇರುತ್ತದೆ. ಇತ್ತೀಚಿಗೆ ಛತ್ರದಲ್ಲಿ 24 ಗಂಟೆಗಳ ಕಾಲ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ, ಕೊಠಡಿಗಳಲ್ಲಿ ಬಿಸಿನೀರಿನ ವ್ಯವಸ್ಥೆ ಹಾಗೂ ಲಾಕರ್ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ

**ಇ** ಕಳೆದ 10 ವರ್ಷಗಳಲ್ಲಿ ಅತಿಥಿ ಗೃಹ/ತಂಗು ಕೊಠಡಿ/ವಸತಿ ಗೃಹ ಮತ್ತು ಇನ್ನಿತರ ರಾಜ್ಯ ಸರ್ಕಾರಕ್ಕೆ ಸೇರಿದ ಕಟ್ಟಡಗಳು ಅತಿಥಿ ಗೃಹ ಕೊಠಡಿಗಳಿಗೆ ಸರ್ಕಾರದಿಂದ ವಿಶೇಷ ಹಾಗೂ ವಾರ್ಷಿಕ ದುರಸ್ಥಿ ಹಾಗೂ ಪೀಠೋಪಕರಣಗಳು ಮತ್ತು ಇತರ ಸೌಲಭ್ಯಗಳೊಂದಿಗೆ ಅಭಿವೃದ್ಧಿ ಮತ್ತು

ಕಳೆದ ಹತ್ತು ವರ್ಷಗಳಿಂದ ತಿರುಮಲದಲ್ಲಿರುವ ಕರ್ನಾಟಕ ರಾಜ್ಯಛತ್ರಕ್ಕೆ ಬಾಧ್ಯಪಟ್ಟ ಕಟ್ಟಡಗಳ ದುರಸ್ತಿ/ನವೀಕರಣ/ ಪೀಠೋಪಕರಣಗಳು ಮತ್ತು ಇತರೆ ಸೌಲಭ್ಯಗಳಿಗಾಗಿ ಸರ್ಕಾರದಿಂದ ಯಾವುದೇ ವಿಶೇಷ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆದರೆ, ಅವಶ್ಯಕ ಸಂದರ್ಭಗಳಲ್ಲಿ ಹೊರರಾಜ್ಯ ಛತ್ರಗಳ ಸಂಯೋಜಿತ

..3

| | | |
|---|---|---|
| | ಮಾಹಿತಿಯನ್ನು ದಾಖಲೆಗಳೊಂದಿಗೆ ನೀಡುವುದು: | ಕೆ.ಎ.ಟಿಯಲ್ಲಿ ಅಪೀಲು ಸಂಖ್ಯೆ:572/2004 ದಾಖಲಿಸಲಾಗಿ, ಸದರಿ ಅಪೀಲು ಕೂಡ ವಜಾ ಆಗಿರುತ್ತದೆ. ಈ ಎರಡೂ ಆದೇಶಗಳನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 28866/2014 ಅನ್ನು ಸಹಾಯಕ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ ಇವರು ದಾಖಲು ಮಾಡಿದ್ದು, ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ |
| ಉ | ಬೆಂಗಳೂರು ಉತ್ತರ ತಾಲ್ಲೂಕು, ನೀಲಸಂದ್ರ ಗ್ರಾಮದ ಸರ್ವೇ ನಂ.79ಕ್ಕೆ ಸಂಬಂಧಿಸಿದ ಸ್ವತ್ತು ಮುಜರಾಯಿ ಇಲಾಖೆಗೆ ಸೇರಿದ ಸ್ವತ್ತಾಗಿದೆಯೇ: ಸೇರಿದ್ದಲ್ಲಿ, ಇಂದಿನ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ದಾಖಲಾತಿಗಳೊಂದಿಗೆ ನೀಡುವುದು? | ಬೆಂಗಳೂರು ಉತ್ತರ ತಾಲ್ಲೂಕು, ನೀಲಸಂದ್ರ ಗ್ರಾಮದ ಸರ್ವೆ ನಂ.79 ರಲ್ಲಿನ 15-12 ಎ/ಗು ಇನಾಂ ಜಮೀನನ್ನು ದಿನಾಂಕ:07/12/1992 ರಂದು ಮುಜರಾಯಿ ಇಲಾಖೆಯ ಅಧಿಕಾರಿಗಳು ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ.<br><br>ಸದರಿ ಜಮೀನಿನಲ್ಲಿ ಸಾಕಷ್ಟು ಒತ್ತುವರಿಯಾಗಿದ್ದು, ದಿನಾಂಕ:07/12/2015 ಮತ್ತು 07/08/2016 ರಂದು ಒತ್ತುವರಿ ತೆರವು ಕಾರ್ಯಾಚರಣೆ ಮಾಡಿ 09-00 ಎಕರೆಯನ್ನು ತೆರವುಗೊಳಿಸಲಾಗಿರುತ್ತದೆ.<br><br>04-00 ಎಕರೆ ಪ್ರದೇಶದಲ್ಲಿ ಸುಮಾರು 216 ಮಂದಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿದ್ದು, ಸದರಿ ಮನೆಗಳನ್ನು ತೆರವುಗೊಳಿಸುವ ಕುರಿತು ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮ ಜರುಗಿಸಲಾಗುತ್ತಿದೆ.<br><br>ಪ್ರಸ್ತುತ ಒತ್ತುವರಿ ತೆರವುಗೊಳಿಸಲಾಗಿರುವ 09-00 ಎಕರೆ ಜಮೀನಿಗೆ ಕಾಂಪೌಂಡ್ ನಿರ್ಮಿಸುವ ಸಲುವಾಗಿ ತಯಾರಿಸಲಾಗಿರುವ ರೂ.80.00 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ರವರಿಗೆ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯ 1/3 ಭಾಗದ ಮೊದಲನೇ ಕಂತಿನ ಬಾಬ್ತು ರೂ.26.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |

(ಸಂಖ್ಯೆ:ಕಂಇ 103 ಮುಸಪ್ರ 2018)

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು

# ಅನುಬಂಧ

| ಕ್ರ. ಸಂ. | ನ್ಯಾಯಾಲಯ / ಪ್ರಾಧಿಕಾರದ ವಿವರ | ಪ್ರಕರಣ ಸಂಖ್ಯೆ | ವಿವಾದದ ಸ್ವರೂಪ | ಪ್ರಕರಣವು ಇತ್ಯರ್ಥಗೊಂಡಿರುವ / ಚಾಲ್ತಿಯಲ್ಲಿರುವ ಬಗ್ಗೆ ಮಾಹಿತಿ | ಆಡಳಿತಾತ್ಮಕವಾಗಿ ಕೈಗೊಂಡಿರುವ ಕ್ರಮ | ಷರಾ |
|---|---|---|---|---|---|---|
| | | | ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೇ ಸಂಖ್ಯೆ 79ರ ಆಸ್ತಿಯ ಬಗ್ಗೆ. | | | |
| 1. | ಮಾನ್ಯ ಸರ್ವೋಚ್ಛ ನ್ಯಾಯಾಲಯ | ಎಸ್.ಎಲ್.ಪಿ34901/2015 | ಸರ್ವೆ ನಂ 79ರ 4 ಎಕರೆ 20 ಗುಂಟೆ ಜಾಗದ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀ ಸಿ.ಮುನಿಯಪ್ಪ ಎಂಬುವವರು ಹಕ್ಕುದಾರಿಕೆ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ ಸಂಖ್ಯೆ:6246/97ಅನ್ನು ದಾಖಲಿಸಿದ್ದು, ಈ ಪ್ರಕರಣವು ದಿನಾಂಕ:02.03.2006ರಂದು ವಜಾ ಗೊಂಡಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ ಶ್ರೀ ಸಿ. ಮುನಿಯಪ್ಪ ಎಂಬುವವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್‌ಎಫ್‌ಎ 1702/06ಅನ್ನು ದಾಖಲಿಸಿ, ಪ್ರಶ್ನಿತ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಲಯವು ಐ/ಎ 04 ಅನ್ನು ವಜಾಗೊಳಿಸಿದ ಪ್ರಯುಕ್ತ ಮತ್ತೆ ಸದರಿಯವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ 34901/15 ಅನ್ನು ದಾಖಲಿಸಿದ್ದು, ಸದರಿ ಎಸ್‌ಎಲ್‌ಪಿಯನ್ನು ಕೂಡ ದಿನಾಂಕ:06.07.2017ರಂದು ವಜಾಗೊಳಿಸಿರುತ್ತದೆ. ಈ ಸಂಬಂಧ ಅನಧಿಕೃತದಾರರ ವಿರುದ್ಧ ಭೂಕಬಳಿಕೆ ನ್ಯಾಯಾಧೀಕರಣದಲ್ಲಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. | ದಿ:06-07-2017 ರಂದು ವಜಾಗೊಂಡಿರುತ್ತದೆ. | ಪ್ರಕರಣವು ವಜಾ ಗೊಂಡಿರುವುದರಿಂದ ಸದರಿ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಮನೆಗಳನ್ನು ತೆರವುಗೊಳ್ಳಸಲು ವಿಶೇಷ ಭೂಕಬಳಿಕೆ ನ್ಯಾಯಾಧೀಕರಣದಲ್ಲಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲು ಖಾಸಗಿ ವಕೀಲರಾದ ಶ್ರೀ ಎ.ಜಿ. ಗುರುರಾಜ್ ರವರನ್ನು ನೇಮಿಸಲಾಗಿರುತ್ತದೆ. | |
| 2. | ಮಾನ್ಯ ಮೆಯೋ ಹಾಲ್ ನ್ಯಾಯಾಲಯ ಮತ್ತು ಸಿಟಿ ಸಿವಿಲ್ | ಓ.ಎಸ್ 8903/2010 ಮತ್ತು ಓ.ಎಸ್ 321/2016 | ಸದರಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ.79ರಲ್ಲಿನ 4 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ ಸಿ.ಮುನಿಯಪ್ಪ, ಶ್ರೀ ಮುನಿಕೃಷ್ಣ ಮತ್ತು ಇತರರು ಅಲ್ಲಿ ಅನಧಿಕೃತರಾಗಿದ್ದು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇವರ ವಿರುದ್ಧ ದಾಖಲಿಸಿದ್ದ ಪ್ರಕರಣದ | ಇತ್ಯರ್ಥಕ್ಕೆ ಬಾಕಿ ಇರುತ್ತದೆ. | ಮೆಯೋ ಹಾಲ್ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ:8903/2010 | |

| | | | | | | |
|---|---|---|---|---|---|---|
| | ನ್ಯಾಯಾಲಯ | | ಸಂಖ್ಯೆ:ಓ.ಎಸ್:8903/2010 ಮತ್ತು ಓ.ಎಸ್. ಸಂಖ್ಯೆ321/2016ರಲ್ಲಿ ಈ ಪ್ರಕರಣಗಳಲ್ಲಿ ಸಹಾಯಕ ಆಯುಕ್ತರು ಬೆಂಗಳೂರು ನಗರ ಜಿಲ್ಲೆ ಇವರು ಇಮ್ಪ್ಲೀಡ್ ಆಗಿದ್ದು, ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ. | | ಖಾಸಗಿ ವಕೀಲರಾದ ಶ್ರೀ ಎ.ಜಿ. ಗುರುರಾಜ್ ರವರನ್ನು ನೇಮಿಸಿ ಸದರಿ ವಕೀಲರ ಮುಖಾಂತರ ಸಹಾಯಕ ಆಯುಕ್ತರವನ್ನು ಇಮ್ಪ್ಲೀಡ್ ಮಾಡಲಾಗಿರುತ್ತದೆ. ಪ್ರಕರಣ ಸಂಖ್ಯೆ:ಓ.ಎಸ್ 321/2016 ಖಾಸಗಿ ವಕೀಲರಾದ ಶ್ರೀ ಎಲ್. ಮಹೇಶ್ ರವರನ್ನು ನೇಮಿಸಿದ್ದು, ಈ ಪ್ರಕರಣದಲ್ಲಿಯೂ ಸಹ ಇಮ್ಪ್ಲೀಡ್ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. | |
| 3. | ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯ | ಓ.ಎಸ್. 38/2014 | ಈ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ. 79ಕ್ಕೆ ಸೇರಿದ ಜಮೀನಿನಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಸ್ವಾಧೀನದಲ್ಲಿರುವ ಅನಧಿಕೃತದಾರರಾದ ಶ್ರೀಮತಿ ನೂರ್‌ಫಾತಿಮ ವಿರುದ್ಧ ಇಲಾಖೆಯ ವತಿಯಿಂದ ಪಿಪಿಎ ಪ್ರಾಧಿಕಾರದಲ್ಲಿ ಪ್ರಕರಣ ಸಂಖ್ಯೆ:ಪಿಪಿಎ:ಸಿಆರ್:39/09-10 ದಾಖಲಿಸಿದ್ದು, ದಿ:22.08.2013ರಂದು ಇಲಾಖಾ ಪರ ಆದೇಶವಾಗಿದ್ದು, ಈ | ವಿಚಾರಣೆ ಹಂತದಲ್ಲಿದೆ | ಈ ಪ್ರಕರಣದಲ್ಲಿ ದೇವಾಲಯದ ಪರವಾಗಿ ವಾದಿಸಲು ಖಾಸಗಿ ವಕೀಲರಾದ ಶ್ರೀ ಎ.ಜಿ. ಗುರುರಾಜ್ ರವರನ್ನು ನೇಮಿಸಲಾಗಿರುತ್ತದೆ. | |

| | | | | | | |
|---|---|---|---|---|---|---|
| | | | ಆದೇಶವನ್ನು ಪ್ರಶ್ನಿಸಿ ಅನಧಿಕೃತದಾರರಾದ ಶ್ರೀಮತಿ ನೂರ್ ಫಾತಿಮಾ ಇವರು ಮಾನ್ಯ ಸಿಟಿಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:ಎಂ.ಎ38/2014ಅನ್ನು ದಾಖಲಿಸಿದ್ದು, ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ. | | | |
| **ಬೆಂಗಳೂರು ನಗರ ಹೊಂಗಸಂದ್ರ ಗ್ರಾಮದ ಸರ್ವೇ ಸಂಖ್ಯೆ:33ರ ಆಸ್ತಿಯ ಬಗ್ಗೆ.** | | | | | | |
| 4. | ಮಾನ್ಯ ಉಚ್ಛ ನ್ಯಾಯಾಲಯ | ರಿಟ್ ಅರ್ಜಿ 28866/2013 | ಈ ದೇವಾಲಯಕ್ಕೆ ಸೇರಿದ ಹೊಂಗಸಂದ್ರ ಗ್ರಾಮದ ಸರ್ವೆ # 33ರ 16 ಎಕರೆ 25 ಗುಂಟೆ ಜಮೀನಿನ ಅಧಿಭೋಗದ ವಿಚಾರಕ್ಕೆ ಸಂಬಂಧಿಸಿದಂತೆ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಮತ್ತು ಕರ್ನಾಟಕ ಮೇಲ್ಮನವಿ ಪ್ರಾಧಿಕಾರವು ದೇವಸ್ಥಾನದ ವಿರುದ್ಧವಾಗಿ ಹೊರಡಿಸುವ ಆದೇಶ ಸಂಖ್ಯೆ:ಐ.ಎನ್.ಎ182/1996-97 ದಿನಾಂಕ:24.01.2001 ಮತ್ತು 572/2004 ದಿನಾಂಕ:28.04.2014ರ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:28866/2014ಅನ್ನು ಸಹಾಯಕ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ ಇವರು ದಾಖಲು ಮಾಡಿದ್ದು, ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. | ಇತ್ಯರ್ಥಕ್ಕೆ ಬಾಕಿ ಇರುತ್ತದೆ. | ಪ್ರಕರಣ ಸಂಬಂಧ ನ್ಯಾಯಾಲಯಕ್ಕೆ ಕಂಡಿಕೆವಾರು ಉತ್ತರಗಳನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳ ಮುಖಾಂತರ ಕ್ರಮವಹಿಸಿದೆ. | |
| 5. | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವಿಶೇಷ ಭೂ ಸ್ವಾದೀನ ಅಧಿಕಾರಿಗಳ ನ್ಯಾಯಾಲಯ | ಆರ್.5/195, 195(ಎ)/ 2016-17 | ದೇವಾಲಯಕ್ಕೆ ಸೇರಿದ ಸರ್ವೆ#.33 ಮತ್ತು 26ರ ಆಸ್ತಿಗೆ ಸಂಬಂಧಿಸಿದಂತೆ ಮೆಟ್ರೋ ಕಾಮಗಾರಿ ಯೋಜನೆಗೆ ಕೆ.ಐ.ಎ.ಡಿ.ಬಿ ಯಿಂದ ಹಣದ ಪರಿಹಾರ ಬಗ್ಗೆ ಪ್ರಕರಣವು ದಾಖಲಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. | ವಿಚಾರಣೆ ಹಂತದಲ್ಲಿದೆ | ಈ ಪ್ರಕಣದಲ್ಲಿ ವಾದ ಮಂಡಿಸಲು ಖಾಸಗಿ ವಕೀಲರಾದ ಶ್ರೀ ಎ.ಜಿ. ಗುರುರಾಜ್ ರವರನ್ನು ನೇಮಿಸಿ ಕ್ರಮ ವಹಿಸಲಾಗುತ್ತಿದೆ. | |
| | | ಆರ್.5/196/ 2016-17 | | | | |
| | | ಆರ್.5/197/2016-17 | | | | |
| | | ಆರ್.5/198/2016-17 | | | | |

| | | | | | | |
|---|---|---|---|---|---|---|
| | | ಆರ್.5/199/2016-17 | | | | |
| | | ಆರ್.5/200/2016-17 | | | | |
| | | ಆರ್.5/200(ಎ)/16-17<br>ಆರ್.5/200(ಬ),/16-17 | | | | |
| | | ಆರ್.5/201/2016-17 | | | | |
| | | ಆರ್.5/202/2016-17 | | | | |
| | | ಆರ್.5/203/2016-17 | | | | |
| | | ಆರ್.5/204,/2016-17 | | | | |
| | | ಆರ್.5/205/2016-17 | | | | |
| | | ಆರ್.5/206/2016-17 | | | | |
| | | ಆರ್.5/207/2016-17 | | | | |
| | | ಆರ್.5/208/2016-17 | | | | |
| | | ಆರ್.5/209/2016-17 | | | | |
| | | ಆರ್.5/210/2016-17 | | | | |
| | | ಆರ್.5/211/2016-17ರ | | | | |

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)